

ಮಾಡಿಸಿ ಗುತ್ತಿಗೆದಾರರಿಗೆ ಕೆಲಸ ಒದಗಿಸುವುದಾ? ಪರ್ವತದ ಒಡಲು ಬಗೆದು ಖನಿಜ ಹೊರತೆಗೆಯುವುದಾ? ಜೀವನದಿಗಳನ್ನು ಅಡ್ಡಗಟ್ಟಿ, ತಿರುವಿ, ಕಾಡು ಮುಳುಗಿಸಿ ಖಾಸಗಿಯವರಿಗೆ ಬಂಡವಾಳ ಹೂಡಲು ಅನುಕೂಲ ಮಾಡಿಕೊಡುವುದಾ? ಕಾಡಿನಂಚಿನಲ್ಲಿರುವ ಒತ್ತುವರಿ ಕೃಷಿ ಭೂಮಿಗೆ ವಾಣಿಜ್ಯ ಬೆಲೆ ದೊರಕಿಸಿಕೊಡುವುದಾ? ಕಲ್ಲು ಕೀಳುವುದು, ಮರ ಉರುಳಿಸುವುದು, ಕಾಡು ಮಳುಗಿಸುವುದು, ಪ್ರವಾಸಿಗರಿಂದ ದುಡ್ಡು ಪೀಕುವುದು, ರೈಲು ಹಳಿ ಹಾಕುವುದು, ಪೈಪ್‌ಲೈನ್ ಅಳವಡಿಸುವುದು, ವಿದ್ಯುತ್ ಸಾಗಣೆಗೆ ಲೈನ್ ಎಳೆಯುವುದು ಮಾತ್ರ ಅಭಿವೃದ್ಧಿ ಅಲ್ಲ ಎನ್ನುವುದನ್ನು ಸರಕಾರವೂ ಮನದಟ್ಟು ಮಾಡಿಕೊಳ್ಳಬೇಕು. ಪರಿಸರಕೇಂದ್ರಿತ ವಿಚಾರಧಾರೆಯಿಲ್ಲದ ಕಾಂಕ್ರೀಟ್ ಅಭಿವೃದ್ಧಿ ಖಂಡಿತ ನಮ್ಮ ಕಾಡುಗಳನ್ನು ಉಳಿಸುವುದಿಲ್ಲ.

ಕಾಡಿನಲ್ಲಿರುವ ಆದಿವಾಸಿಗಳ ಪುನರ್ವಸತಿಯ ವಿಷಯವೂ ಈಗ ರಾಜಕೀಕರಣಗೊಂಡಿದೆ. ಮಲೆಕುಡಿಯರು, ಸಿದ್ದಿಯರನ್ನು ಮುಖ್ಯವಾಹಿನಿಗೆ ತರುತ್ತೇವೆಂದು ಹೊರಟಿರುವ ಅಧಿಕಾರಸ್ಥರ ಯೋಜನೆಗಳೆಲ್ಲವೂ ನಮ್ಮ ಕಾಡುಗಳ ಜೀವವೈವಿಧ್ಯವನ್ನು ನಾಶ ಮಾಡುವ ಸಂಚಿನಂತೆ ಗೋಚರಿಸುತ್ತಿವೆ. ಅರಣ್ಯಲೂಟಿಗೆ ಈ ಯೋಜನೆಗಳೇ ಕಳ್ಳದಾರಿಯಾಗುವುದೂ ನಡೆದಿದೆ.

ಹಣದಿಂದ ನಮಗೆ ಉಸಿರಾಡಲು ಗಾಳಿ, ಶುಭ್ರ ನೀರು, ಆರೋಗ್ಯಕರ ವಾತಾವರಣ ಸಿಗುವುದಿಲ್ಲ. ಅದಕ್ಕಾಗಿ ನಮ್ಮ ಅರಣ್ಯಗಳು ಹೆಚ್ಚು ವಿಸ್ತಾರವಾಗಿ ಬೆಳೆಯಬೇಕು ಮತ್ತು ಅದು ನೈಸರ್ಗಿಕವಾಗಿಯೇ ಇರಬೇಕು. ಅರಣ್ಯದೊಳಗೆ ಬದುಕುತ್ತಿರುವವರು ಈ ಮೂರನ್ನು ಗಮನದಲ್ಲಿಟ್ಟುಕೊಂಡು ಪ್ರಕೃತಿಯೊಡನೆ ಹೊಂದಿಕೊಂಡು ಜೀವಿಸಬೇಕು. ಅದು ಸಾಧ್ಯವಾಗುವಂತಹ ಪುನರ್ವಸತಿ ನೀತಿ ನಮ್ಮಲ್ಲಿ ಇಲ್ಲ. ಆದಿವಾಸಿಗಳು ತಮ್ಮ ಹಳೆಯ ಬದುಕಿನ ಲಯದಲ್ಲೇ ಈಗಲೂ ಇದ್ದಾರೆ ಎನ್ನವುದು ನಮ್ಮನ್ನು ನಾವೇ ವಂಚಿಸಿಕೊಳ್ಳುವ ಮಾತೂ ಆಗುತ್ತದೆ. ನಗರೀಕರಣ ಮತ್ತು ಆಧುನೀಕರಣ ಅವರ ಮೇಲೂ ಪ್ರಭಾವ ಬೀರಿದೆ. ಇನ್ನೊಂದೆಡೆ ಬಲಿಷ್ಠರು ಒತ್ತುವರಿ ಮಾಡಿಕೊಂಡಿರುವ ಅರಣ್ಯಪ್ರದೇಶ ಮಾನವ– ಪ್ರಾಣಿಗಳ ಸಂಘರ್ಷವನ್ನು ದಿನೇ ದಿನೇ ಹೆಚ್ಚಿಸುತ್ತಿವೆ. ವನಮಹೋತ್ಸವದಂದು ಒಂದು ಗಿಡವನ್ನು ಕೈಯಲ್ಲಿ ಹಿಡಿದು ಫೋಟೋ ತೆಗೆಸಿಕೊಂಡು, ಪೇಪರಿನಲ್ಲಿ ಹಾಕಿಸಿಕೊಳ್ಳುವುದೇ ಪರಿಸರ ರಕ್ಷಣೆ ಎಂದುಕೊಂಡಿದ್ದೇವೆ.

ಪಶ್ಚಿಮ ಘಟ್ಟಗಳ ಶೋಷಣೆಯೇ ಹಲವರ ಜೀವನಕ್ಕೆ ಆಧಾರವಾಗಿರುವುದು ವಿಪರ್ಯಾಸ. ಹಾಗಾಗಿ ಸುಲಭವಾಗಿ ಮತ್ತು ಸರಾಗವಾಗಿ ನಡೆಯುತ್ತಿರುವ ಈ ಲೂಟಿಯ ಜಾತ್ರೆಯನ್ನು ನಿಲ್ಲಿಸಲು ಯಾರೂ ಮುಂದಾಗುತ್ತಿಲ್ಲ. ಪ್ರತಿಯೊಬ್ಬರೂ ಈ ವ್ಯವಸ್ಥೆಯ ಲಾಭವನ್ನು ಒಂದಲ್ಲ ಒಂದು ರೀತಿಯಲ್ಲಿ ಪಡೆಯುತ್ತಿದ್ದಾರೆ ಇಲ್ಲವೇ ಪಡೆಯುವ ಹವಣಿಕೆಯಲ್ಲಿದ್ದಾರೆ. ಅನೂಚಾನವಾಗಿ ಸಿಗುತ್ತಿರುವ ಲಾಭವನ್ನು ಕಳೆದುಕೊಳ್ಳಲು ಯಾರು ಸಿದ್ಧರಿದ್ದಾರೆ ಹೇಳಿ? ತಮ್ಮ ಹಾಗೂ ತಮ್ಮವರ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು , ಅದರ ಮೂಲಕ ಆರ್ಥಿಕ ಹಾಗೂ ರಾಜಕೀಯ ಲಾಭ ಮಾಡಿಕೊಳ್ಳಲು ಹೊರಟಿರುವವರು ಆತ್ಮ ವಿಮರ್ಶೆ ಮಾಡಿಕೊಳ್ಳಬೇಕು. ನಾವು ಸತ್ತ ಕೂಡಲೇ ಈ ಜಗತ್ತೇನೂ ನಿಂತು ಹೋಗುವುದಿಲ್ಲ. ನಮ್ಮ ಮುಂದಿನ ತಲೆಮಾರಿಗೂ ನಾವೀಗ ಅನುಭವಿಸುತ್ತಿರುವ ಸಕಲ ಜೈವಿಕ ಅನುಕೂಲಗಳ ಅಗತ್ಯವಿದೆ.

ಸರ್ಕಾರಕ್ಕೆ ತನ್ನದೇ ಆದ ಪರಿಸರ ಕಾಳಜಿ ಇದ್ದಲ್ಲಿ, ಗೋಮಾಳ ಪ್ರದೇಶ, ಸಾರ್ವಜನಿಕ ಕೆರೆ ಹಾಗೂ ಸಮುದಾಯದ ಬಳಕೆಗಾಗಿ ಮೀಸಲಾಗಿದ್ದು ಈಗ ಖಾಸಗಿ ಸ್ವತ್ತಾಗಿರುವ ಒತ್ತುವರಿ ಪ್ರದೇಶಗಳನ್ನು ಸೂಕ್ತ ಕಾನೂನಿನ ಅನ್ವಯ ಭೂರಹಿತರಿಗೆ ಹಾಗೂ ಭೂಮಿ ಕಳೆದುಕೊಂಡ ಸಣ್ಣ ಹಿಡುವಳಿದಾರರಿಗೆ ಮರು ಹಂಚಿಕೆ ಮಾಡಲಿ. ಆಗಲಾದರೂ ಪರಿಸರ ಕಾಳಜಿಯ ಜೊತೆಜೊತೆಗೆ ಸಾಮಾಜಿಕ ನ್ಯಾಯವನ್ನೂ ಸಾಧಿಸಿದಂತಾಗುತ್ತದೆ. ಪರಿಸರದ ಪರವಾಗಿ ಮಾತನಾಡುವವರೆಲ್ಲರೂ ಪ್ರಗತಿ ವಿರೋಧಿಗಳೆಂದು ಬಿಂಬಿಸುವ ಪ್ರಯತ್ನ ಎಲ್ಲೆಡೆಯೂ ನಡೆಯುತ್ತಿದೆ. ಪ್ರಗತಿಯೆಂದರೆ ಸಾರ್ವಜನಿಕ ಸಂಪನ್ಮೂಲಗಳನ್ನು ಕೆಲವೇ ಜನರ ಅಗತ್ಯಕ್ಕೆ ಬಳಸಿಕೊಳ್ಳುವುದೆಂದು ತಿಳಿದಿರುವವರಿಗೆ ಬುದ್ಧಿಹೇಳುವವರು ಯಾರು? ಗಣಿ, ಟಿಂಬರ್, ಒತ್ತುವರಿ, ರೆಸಾರ್ಟ್ ಹಾಗೂ ಗುತ್ತಿಗೆ ಲಾಬಿಗೆ ಪಾರಿಸರಿಕ ಹಿತಾಸಕ್ತಿಯನ್ನು